KA14070024332023

## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, 3 ನೇ ನ್ಯಾಯಾಲಯ, ಶಿವಮೊಗ್ಗ

ಉಪಸ್ಥಿತರು

**ಶ್ರೀಮತಿ ಶೃತಿ ವಿ.**

ಬಿ.ಎ.,ಎಲ್‌ಎಲ್.ಬಿ., ಎಲ್‌ಎಲ್.ಎಂ.

**ಜೆ.ಎಂ.ಎಫ್.ಸಿ. 3 ನೇ ನ್ಯಾಯಾಲಯ, ಶಿವಮೊಗ್ಗ.**

**ಸಿ.ಸಿ.ನಂ.1977/2023**

**ದಿನಾಂಕ 23 ನೇ ಜುಲೈ, 2026**

**ಪಿರ್ಯಾದಿ :** ಗ್ರಾಮಾಂತರ ಪೋಲಿಸ್ ಠಾಣೆ, ಶಿವಮೊಗ್ಗ.

**(ಎ.ಪಿ.ಪಿ.)**

-: ವಿರುದ್ಧ :-

**ಆರೋಪಿತ :** ಶೇಖರ್ ನಾಯ್ಕ ಬಿನ್ ತಾವ್ಯ ನಾಯ್ಕ,
ವಯಸ್ಸು ಸುಮಾರು 43 ವರ್ಷ,
ವಾಸಾಃ ಕೊಮ್ಮನಾಳು ಗ್ರಾಮ, ಶಿವಮೊಗ್ಗ ತಾಲ್ಲೂಕು.

**(ಶ್ರೀ ಎನ್.ವೈ.ಪಿ., ವಕೀಲರು)**

| | | |
|---|---|---|
| 1. | ಕೃತ್ಯ ಎಸಗಿದ ದಿನಾಂಕ | 22-03-2023 |
| 2. | ಅಪರಾಧ ವರಿದಿ ಮಾಡಿದ ದಿನಾಂಕ | 22-03-2023 |
| 3. | ಫಿರ್ಯಾದುದಾರ/ಬಾತ್ಮಿದಾರರ ದಿನಾಂಕ | ಸುರೇಶ್ ಎಂ. |
| 4. | ಆರೋಪಿತನನ್ನು ಬಂಧಿಸಿದ ದಿನಾಂಕ | - - - |
| 5. | ಆರೋಪಿತನನ್ನು ಬಿಡುಗಡೆ ಮಾಡಿದ ದಿನಾಂಕ | 27-2-2024 |
| 6. | ಸಾಕ್ಷಿದಾರರ ವಿಚಾರಣೆ ಪ್ರಾರಂಭವಾದ ದಿನಾಂಕ | 24-2-2025 |
| 7. | ಸಾಕ್ಷಿದಾರರ ವಿಚಾರಣೆ ಕೊನೆಗೊಂಡ ದಿನಾಂಕ | 27-1-2026 |

| | | |
|---|---|---|
| 8. | ದೂಷಿಸಲಾದ ಆರೋಪಗಳು | ಕರ್ನಾಟಕ ಅಬಕಾರಿ ಕಾಯ್ದೆಯ ಕಲಂ 32 ಮತ್ತು 34 |
| 9. | ನ್ಯಾಯಾಧೀಶರ ಅಭಿಪ್ರಾಯ | ಅಂತಿಮ ಆದೇಶದಂತೆ |

## :: ತೀರ್ಪು ::

ಶಿವಮೊಗ್ಗ ಗ್ರಾಮಾಂತರ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು ಆರೋಪಿತನ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆಯ ಕಲಂ 32 ಮತ್ತು 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಎಸಗಿರುತ್ತಾರೆಂದು ಆರೋಪಿಸಿ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ:-**

ದಿನಾಂಕ 22-03-2023 ರಂದು ಬೆಳಗ್ಗೆ 10-30 ಗಂಟೆ ಸಮಯದಲ್ಲಿ, ಶಿವಮೊಗ್ಗದ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಾ ಕೊಮ್ಮನಾಳು ಗ್ರಾಮದ ವಾಸಿಯಾದ ಆರೋಪಿತನು ತನ್ನ ಕಿರಾಣಿ ಅಂಗಡಿಯ ಮುಂಭಾಗದ ಕೊಮ್ಮನಾಳು ಗ್ರಾಮದಿಂದ ಬೂದಿಗೆರೆ ಗ್ರಾಮಕ್ಕೆ ಹೋಗುವ ಸಾರ್ವಜನಿಕರ ರಸ್ತೆಯಲ್ಲಿ ಕಾನೂನು ಬಾಹಿರವಾಗಿ ಮಧ್ಯವನ್ನು ದಾಸ್ತಾನು ಮಾಡಿಕೊಂಡು ಸಾರ್ವಜನಿಕರಿಗೆ ಅಕ್ರಮವಾಗಿ ಮಾರಾಟ ಮಾಡುತ್ತಿದ್ದ ಬಗ್ಗೆ ಖಚಿತ ಮಾಹಿತಿ ಬಂದ ಮೇರೆಗೆ ಚಾಸಾ-2 ರವರು ಚಾಸಾ-5 ಮತ್ತು ಚಾಸಾ-6 ರವರೊಂದಿಗೆ ಹೋಗಿ ದಾಳಿ ಮಾಡಿ ಆರೋಪಿತನ ವಶದಲ್ಲಿದ್ದ 90 ಎಂ.ಎಲ್.ನ ಹೇವರ್ಡ್ಸ ಚಿಯರ್ಸ್ ವಿಸ್ಕಿಯ 65 ಮಧ್ಯದ ಪೌಚುಗಳು, 90 ಎಂ.ಎಲ್.ನ ಒರಿಜನಲ್ ಚಾಯ್ಸ್ ವಿಸ್ಕಿಯ 45 ಮಧ್ಯದ ಪೌಚುಗಳು ಮತ್ತು 90 ಎಂ.ಎಲ್.ನ ಒರಿಜನಲ್ ಚಾಯ್ಸ್ ವಿಸ್ಕಿಯ 51 ಮಧ್ಯದ ಪೌಚುಗಳನ್ನು ಅಮಾನತುಪಡಿಸಿಕೊಳ್ಳಲಾಗಿದೆ ಎಂದು ಆಪಾದಿಸಲಾಗಿದೆ. ಆದ್ದರಿಂದ ಆರೋಪಿತನ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆಯ ಕಲಂ 32 ಮತ್ತು 34ರ ಅಡಿಯಲ್ಲಿ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಲಾಗಿದೆ.

3. ಈ ಪ್ರಕರಣದ ಫಿರ್ಯಾದುದಾರರಾದ ಚಾಸಾ-1 ರವರು ನೀಡಿದ ದೂರಿನ ಮೇರೆಗೆ ಶಿವಮೊಗ್ಗದ ಗ್ರಾಮಾಂತರ ಪೋಲಿಸ್ ಠಾಣೆಯ ಠಾಣಾಧಿಕಾರಿರವರು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ, ತನಿಖೆಯನ್ನು ಕೈಗೊಂಡು, ತನಿಖೆಯು ಪೂರ್ಣಗೊಂಡ ನಂತರ ಆರೋಪಿತನು ಅಪರಾಧ ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದ ಮೇರೆಗೆ, ಶಿವಮೊಗ್ಗದ ಗ್ರಾಮಾಂತರ ಪೋಲಿಸ್ ಠಾಣೆಯ ಆರಕ್ಷಕ ನಿರೀಕ್ಷಕರವರು ಮೇಲ್ಕಂಡ ಕಲಂಗಳಡಿಯಲ್ಲಿ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ತನಿಖಾಧಿಕಾರಿಯು ಅಂತಿಮ ವರದಿಯನ್ನು ಸಲ್ಲಿಸಿದ ನಂತರ ಆರೋಪಿತನ ವಿರುದ್ದ ಮೇಲ್ಕಂಡ ಆರೋಪದ ಮೇಲೆ ಸಂಜ್ಞೆಯನ್ನು ತೆಗೆದುಕೊಂಡು ಆಪಾದಿತನಿಗೆ ಸಮನ್ಸ್ ಹೊರಡಿಸಲಾಗಿ ಆರೋಪಿತನು ತನ್ನ ವಕೀಲರ ಮೂಲಕ ದಿನಾಂಕ 27-2-2024 ರಂದು ನ್ಯಾಯಾಲಯಕ್ಕೆ ಹಾಜರಾಗಿ, ಜಾಮೀನಿನ ಮೇಲೆ ಬಿಡುಗಡೆಯಾಗಿದ್ದು, ಆತನಿಗೆ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಪ್ರಕಾರ ಅಂತಿಮ ವರದಿಯ ನಕಲು ಪ್ರತಿಯನ್ನು ನೀಡಲಾಗಿರುತ್ತದೆ. ನ್ಯಾಯಾಲಯವು ಆರೋಪಿತನ ವಿರುದ್ದ ದೋಷಾರೋಪಣೆಯನ್ನು ಸಿದ್ಧಪಡಿಸಿ ಆತನಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಕೇಳಲಾಗಿ ಅವರು ದೋಷಾರೋಪಣೆಯನ್ನು ಅಲ್ಲಗಳೆದ ಕಾರಣ ಪ್ರಕರಣವನ್ನು ಅಭಿಯೋಜನೆಯ ಪರ ಸಾಕ್ಷಿಯ ವಿಚಾರಣೆಗೆ ನಿಗದಿಪಡಿಸಲಾಯಿತು.

4. ಆರೋಪಿತನ ವಿರುದ್ಧ ಮಾಡಲಾದ ಆರೋಪಣೆಗಳನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯು 03 ಸಾಕ್ಷಿದಾರರನ್ನು ಪ್ರಾಸಾ-1 ರಿಂದ ಪ್ರಾಸಾ-3 ಎಂದು ವಿಚಾರಣೆಗೆ ಒಳಪಡಿಸಿಕೊಂಡಿದ್ದು, ತಮ್ಮ ಪರವಾಗಿ ಒಟ್ಟು 05 ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-5 ಎಂದು ಗುರುತಿಸಿಕೊಂಡಿರುತ್ತದೆ. ಅಭಿಯೋಜನೆಯ ಪರವಾಗಿ ಸಾಕ್ಷಿ ವಿಚಾರಣೆ ಮುಕ್ತಾಯಗೊಂಡ ಬಳಿಕ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರಡಿಯಲ್ಲಿ ಆರೋಪಿತನ ಹೇಳಿಕೆಯನ್ನು ದಾಖಲು ಮಾಡಿದ್ದು, ಅದರಲ್ಲಿ

ಆರೋಪಿತನು ಅಭಿಯೋಜನಾ ಸಾಕ್ಷ್ಯಾಧಾರದಲ್ಲಿ ತಮ್ಮ ವಿರುದ್ಧ ಮೂಡಿಬಂದ ಸಂಗತಿಗಳನ್ನು ಅಲ್ಲಗಳೆದಿರುತ್ತಾರೆ ಹಾಗೂ ತಮ್ಮ ಪರ ಪ್ರತಿರಕ್ಷಕ ಸಾಕ್ಷ್ಯವಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

5. ಸಹಾಯಕ ಸರ್ಕಾರಿ ಅಭಿಯೋಜಕರ ಹಾಗೂ ಆರೋಪಿತನ ಪರ ವಕೀಲರ ವಾದ ವಿವಾದಗಳನ್ನು ಆಲಿಸಲಾಯಿತು ಹಾಗೂ ಅಭಿಯೋಜನೆಯ ಪರ ಹಾಜರುಪಡಿಸಲಾದ ದಾಖಲಾತಿಗಳನ್ನು ಪರಿಶೀಲಿಸಲಾಯಿತು.

6. ಈ ಕೆಳಗಿನ ಅಂಶಗಳು ನನ್ನ ಪರ್ಯಾಲೋಚನೆಗೆ ಉದ್ಭವಿಸುತ್ತವೆಃ

1. ದಿನಾಂಕ 22-03-2023 ರಂದು ಬೆಳಿಗ್ಗೆ 10-30 ಗಂಟೆ ಸಮಯದಲ್ಲಿ, ಶಿವಮೊಗ್ಗದ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಕೊಮ್ಮನಾಳು ಗ್ರಾಮದಲ್ಲಿ ಆರೋಪಿತನು ತನ್ನ ಕಿರಾಣಿ ಅಂಗಡಿಯ ಮುಂಭಾಗದ ಕೊಮ್ಮನಾಳು ಗ್ರಾಮದಿಂದ ಬೂದಿಗೆರೆ ಗ್ರಾಮಕ್ಕೆ ಹೋಗುವ ಸಾರ್ವಜನಿಕ ರಸ್ತೆಯಲ್ಲಿ, ಆರೋಪಿತನು ಸರ್ಕಾರದಿಂದ ಯಾವುದೇ ಪರವಾನಿಗೆ ಹೊಂದದೆ ಅಕ್ರಮವಾಗಿ 90 ಎಂ.ಎಲ್.ನ ಹೇವರ್ಡ್ಸ್ ಚಿಯರ್ಸ್ ವಿಸ್ಕಿಯ 65 ಮಧ್ಯದ ಪೌಚುಗಳು, 90 ಎಂ.ಎಲ್.ನ ಒರಿಜನಲ್ ಚಾಯ್ಸ್ ವಿಸ್ಕಿಯ 45 ಮಧ್ಯದ ಪೌಚುಗಳು ಮತ್ತು 90 ಎಂ.ಎಲ್.ನ ಒರಿಜನಲ್ ಚಾಯ್ಸ್ ವಿಸ್ಕಿಯ 51 ಮಧ್ಯದ ಪೌಚುಗಳನ್ನು ಕಾನೂನು ಬಾಹಿರವಾಗಿ ಅಕ್ರಮವಾಗಿ ದಾಸ್ತಾನು ಮಾಡುವ ಮೂಲಕ ಆರೋಪಿತನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ?

2. ಈ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಆರೋಪಿತನು ಸರ್ಕಾರದಿಂದ ಯಾವುದೇ ಪರವಾನಿಗೆ

ಹೊಂದದೆ ಮೇಲೆ ಹೇಳಿದ ಮಧ್ಯದ ಪೌಚ್‌ಗಳನ್ನು ತನ್ನ ಸ್ವಾಧೀನದಲ್ಲಿ ಹೊಂದಿ ಮಾರಾಟ ಮಾಡುವ ಮೂಲಕ ಆರೋಪಿತನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ?

3. ಏನು ಆದೇಶ?

7. ಈ ಮೇಲಿನ ಅಂಶಗಳಿಗೆ ಈ ಕೆಳಗೆ ವಿವರಿಸಿರುವ ಕಾರಣಗಳಿಗಾಗಿ ನನ್ನ ಉತ್ತರಗಳು ಈ ಕೆಳಗಿನಂತಿವೆಃ

| | | |
|---|---|---|
| ಅಂಶ-1 ಮತ್ತು 2 | : | ನಕಾರಾತ್ಮಕವಾಗಿ |
| ಅಂಶ-3 | : | ಅಂತಿಮ ಆದೇಶದಂತೆ,<br>ಈ ಕೆಳಕಂಡ ಕಾರಣಗಳಿಗಾಗಿ, |

## :: ಕಾರಣಗಳು ::

8. **ಅಂಶ-1 ಮತ್ತು 2 :** ಈ ಎರಡು ಅಂಶಗಳು ಪರಸ್ಪರ ಒಂದಕ್ಕೊಂದು ಅಂತರ್ ಸಂಬಂಧ ಹೊಂದಿರುವುದರಿಂದ ಪ್ರಕರಣದ ಸಾಕ್ಷ್ಯ ಹಾಗೂ ಕಾರಣಗಳ ಪುನರಾವರ್ತನೆಯನ್ನು ತಡೆಯುವುದಕ್ಕೋಸ್ಕರ ಸದರಿ ಅಂಶಗಳನ್ನು ನ್ಯಾಯಾಲಯವು ಒಟ್ಟಿಗೆ ಚರ್ಚಿಸಿರುತ್ತದೆ.

9. ಅಭಿಯೋಜನೆಯು ಈ ಪ್ರಕರಣದ ಪಿರ್ಯಾದುದಾರರಾದ ಪ್ರಾಸಾ-1 ರವರನ್ನು ವಿಚಾರಣೆಗೆ ಒಳಪಡಿಸಿರುತ್ತದೆ. ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 22.03.2023 ರಂದು ಬೆಳಗ್ಗೆ 10.30 ಗಂಟೆ ಸಮಯದಲ್ಲಿ ಬಿಕೋನಹಳ್ಳಿ ಗ್ರಾಮದಲ್ಲಿ ತಾನು ಕರ್ತವ್ಯದಲ್ಲಿದ್ದಾಗ ಬಾತ್ಮಿದಾರರು ಕೊಮ್ಮನಾಳು ಗ್ರಾಮದಲ್ಲಿ ಯಾರೋ ಒಬ್ಬರು ಕಾನೂನು ಬಾಹಿರವಾಗಿ ಮಧ್ಯವನ್ನು ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿಯನ್ನು ನೀಡಿದ ಮೇರೆಗೆ ತಮ್ಮ ಸಿಬ್ಬಂದಿಗಳಾದ ಚಾಸಾ-3 ಮತ್ತು ಚಾಸಾ-4 ರವರನ್ನು ಕರೆದುಕೊಂಡು ಮಾಹಿತಿ ಬಂದ ಸ್ಥಳಕ್ಕೆ

ಹೋಗಿ ಮಾಹಿತಿ ಬಗ್ಗೆ ಖಚಿತ ಪಡಿಸಿಕೊಂಡು ಠಾಣೆಗೆ ಬಂದು ಚಾಸಾ-11 ರವರಿಗೆ ದೂರು ಕೊಟ್ಟಿದ್ದು, ಸದರಿ ದೂರಿನನ್ವಯ ಪ್ರ.ವ.ವ ಯನ್ನು ದಾಖಲಿಸಿಕೊಂಡ ನಂತರ ನನ್ನ ಜೊತೆ ಚಾಸಾ-3 ಮತ್ತು ಚಾಸಾ-4 ರವರನ್ನು ಹಾಗೂ ಪಂಚರಾದ ಚಾಸಾ-5 ಮತ್ತು ಚಾಸಾ-6 ರವರನ್ನು ಕರೆದುಕೊಂಡು ಇಲಾಖಾ ಜೀಪಿನಲ್ಲಿ ಮಾಹಿತಿ ಬಂದ ಸ್ಥಳಕ್ಕೆ ಹೊಗಿ ಸ್ವಲ್ಪ ದೂರದಲ್ಲಿ ನಿಂತು ನೋಡಿದಾಗ ಒಬ್ಬ ವ್ಯಕ್ತಿ ಸಾರ್ವಜನಿಕರನ್ನು ಸೇರಿಸಿಕೊಂಡು ಅಕ್ರಮವಾಗಿ ಮಧ್ಯವನ್ನು ಮಾರಾಟ ಮಾಡುತ್ತಿರುವುದು ಕಂಡು ಬಂದ ಮೇರೆಗೆ, ಆತನನ್ನು ಹಿಡಿಯಲು ದಾಳಿ ಮಾಡಿದಾಗ ತಮ್ಮನ್ನು ನೋಡಿ ಮಧ್ಯದ ಬಾಕ್ಸ್ ಗಳನ್ನು ಬಿಟ್ಟು ಓಡಿ ಹೋಗಿರುತ್ತಾನೆ ಎಂದು, ನಂತರ ಮಧ್ಯದ ಬಾಕ್ಸನ್ನು ತೆರೆದು ನೋಡಿದಾಗ ಅವುಗಳಲ್ಲಿ 90 ಎಂ.ಎಲ್.ನ ಹೇವರ್ಡ್ 65 ಪೌಚುಗಳು, ಒರಿಜಿನಲ್ ಚಾಯ್ಸ್ 45 ಪೌಚುಗಳು, ಇನ್ನೊಂದು ಬಾಕ್ಸಿನಲ್ಲಿ ಒರಿಜಿನಲ್ ಚಾಯ್ಸ್ 51 ಪೌಚುಗಳು ಇದ್ದವು ಎಂದು ಮತ್ತು ಅವುಗಳನ್ನು ಪಂಚರ ಸಮಕ್ಷಮದಲ್ಲಿ ಪಂಚನಾಮೆ ಜರುಗಿಸಿ, ಕಚ್ಚಾ ನಕಾಶೆ ತಯಾರಿಸಿ, ಅಮಾನತ್ತುಪಡಿಸಿಕೊಳ್ಳಲಾಯಿತು ಎಂದು ಮತ್ತು ನ್ಯಾಯಾಲಯದ ಮುಂದೆ ಹಾಜರಿದ್ದ ಆರೋಪಿತನನ್ನು ನೋಡಿ ಗುರುತಿಸಿ ಸಾಕ್ಷ್ಯವನ್ನು ನುಡಿದಿರುತ್ತಾರೆ.

10. ಫ್ರಾಸಾ-1 ರವರನ್ನು ಆರೋಪಿತನ ಪರ ವಕೀಲರು ಮಾಡಿದ ಪಾಟೀ ಸವಾಲಿನಲ್ಲಿ, ಬೆಳಗ್ಗೆ 09-00 ಗಂಟೆಗೆ ಠಾಣೆಯನ್ನು ಬಿಟ್ಟು ಬಿಕೋನಹಳ್ಳಿ ಗ್ರಾಮದಲ್ಲಿ ಗಸ್ತಿನಲ್ಲಿದ್ದೆ, ಆ ಬಗ್ಗೆ ಠಾಣಾ ಡೈರಿಯಲ್ಲಿ ನಮೂದು ಮಾಡಲು ಹೇಳಿದ್ದೆ ಎಂದು, ಸದರಿ ಠಾಣಾ ಡೈರಿಯನ್ನು ಹಾಜರುಪಡಿಸಿಲ್ಲ ಎಂದು, ಪಂಚರಿಗೆ ನೋಟಿಸನ್ನು ಕೊಟ್ಟಿರುವುದಿಲ್ಲ ಎಂದು, ಆರೋಪಿತನು ಮಧ್ಯವನ್ನು ಮಾರಾಟ ಮಾಡುವ ಸಮಯದಲ್ಲಿ ಆತನನ್ನು ಹಿಡಿದಿರುವುದಿಲ್ಲ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

11. ಫ್ರಾಸಾ-2 ಮತ್ತು ಫ್ರಾಸಾ-3 ರವರು ತನಿಖಾಧಿಕಾರಿಯಾಗಿದ್ದು, ಸದರಿಯವರಲ್ಲಿ ಫ್ರಾಸಾ-2 ರವರು ದಿನಾಂಕ 22-3-2023 ರಂದು ಚಾಸಾ-1 ರವರಿಂದ ದೂರನ್ನು ಸ್ವೀಕರಿಸಿದ

ಮೇರೆಗೆ ಪ್ರ.ವ.ವರದಿಯನ್ನು ದಾಖಲಿಸಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿದ್ದು ಹಾಗೂ ಫ್ರಾಸಾ-3 ರವರು ಚಾಸಾ-10 ರವರಿಂದ ಎಫ್.ಎಸ್.ಎಲ್. ವರದಿಯನ್ನು ಪಡೆದಿರುತ್ತೇನೆ ಎಂದು ಮತ್ತು ಆರೋಪತನ ವಿರುದ್ದ ಆರೋಪ ದೃಢಪಟ್ಟ ಹಿನ್ನಲೆಯಲ್ಲಿ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುವುದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಆರೋಪಿತನ ಪರ ವಕೀಲರು ಪಾಟೀ ಸವಾಲಿನಲ್ಲಿ ಫ್ರಾಸಾ-2 ಮತ್ತು ಫ್ರಾಸಾ-3 ರವರಿಗೆ ಕೇಳಿದ ಪ್ರಶ್ನೆಗಳನ್ನು ಅಲ್ಲೆಗಳೆದಿರುತ್ತಾರೆ.

12. ಈ ಪ್ರಕರಣದಲ್ಲಿ ಅಭಿಯೋಜನೆಯು ಸ್ವತಂತ್ರ ಮಹಜರ್ ಸಾಕ್ಷಿಗಳಾದ ಚಾಸಾ-5 ಮತ್ತು ಚಾಸಾ-6 ರವರನ್ನು ವಿಚಾರಣೆ ಮಾಡುವಲ್ಲಿ ವಿಫಲವಾಗಿದೆ. ಅವರ ವಿರುದ್ಧ ಸಾಕಷ್ಟು ಬಾರಿ ಸಮನ್ಸ್ ಮತ್ತು ವಾರಂಟ್ ಹೊರಡಿಸಿದ್ದರೂ ಸಹ, ಅವರ ಹಾಜರಾತಿಯನ್ನು ಪಡೆಯಲು ಸಾಧ್ಯವಾಗಲಿಲ್ಲ ಹಾಗೂ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ವಿಚಾರಣೆ ನೀಡಿರುವುದಿಲ್ಲ. ಅಭಿಯೋಜನೆ ಅವರ ಹಾಜರಾತಿಯನ್ನು ಖಚಿತಪಡಿಸಿಕೊಳ್ಳಲು ವಿಫಲವಾಗಿದೆ. ಆದ್ದರಿಂದ, ಅಭಿಯೋಜನೆಯು ಅಮಾನತ್ತು ಪಂಚನಾಮೆ ವಿಷಯಗಳನ್ನು ಸಾಬೀತುಪಡಿಸಲು ಸಾಧ್ಯವಾಗಿರುವುದಿಲ್ಲ.

13. ಒಟ್ಟಾರೆಯಾಗಿ ಮೇಲಿನ ಸಾಕ್ಷ್ಯಾಧಾರಗಳನ್ನು ಗಮನಿಸಿದಾಗ, ಫ್ರಾಸಾ-1 ರವರು ದಾಳಿ ಮಾಡಿದ ಸಾಕ್ಷಿದಾರರಾಗಿದ್ದು, ಇವರು ತಮ್ಮ ಪಾಟೀ ಸವಾಲಿನಲ್ಲಿ, ದಾಳಿಯ ಕಾಲಕ್ಕೆ ಆರೋಪಿಯನ್ನು ಹಿಡಿದಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ ಹಾಗೂ ಆರೋಪಿಯೇ ಮದ್ಯ ಮಾರಾಟ ಮಾಡುತಿತದ್ದ ಎಂದು ತೋರಿಸಲು ಯಾವುದೇ ಸ್ವತಂತ್ರ್ಯ ಸಾಕ್ಷಿದಾರರ ಸಾಕ್ಷ್ಯವು ಸಹ ಲಭ್ಯವಿರುವುದಿಲ್ಲ. ಇದರಿಂದ ಈ ಪ್ರಕರಣದ ಆರೋಪಿಯೇ ಘಟನಾ ದಿನ ಅಕ್ರಮವಾಗಿ ಮಧ್ಯವನ್ನು ಮಾರಾಟ ಮಾಡುತ್ತಿದ್ದರು ಎಂದು ನಂಬಲು ಯಾವುದೇ ಬಲವಾದ ಸಾಕ್ಷ್ಯಾಧಾರಗಳು ಮತ್ತು ದಾಖಲೆಗಳು ಇಲ್ಲದಿರುವುದರಿಂದ ಅಭಿಯೋಜನೆ ಪ್ರಕರಣದ ಮೇಲೆ ಅನುಮಾನ

ಉಂಟು ಮಾಡುತ್ತದೆ. ಪಂಚರು ಹಾಗೂ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-3 ಮತ್ತು ಚಾಸಾ-4 ರವರ ಸಮಕ್ಷಮದಲ್ಲಿ ದಾಳಿ ಮಾಡಿ ನಿಪಿ-2 ಪಂಚನಾಮೆಯಡಿಯಲ್ಲಿ ಮದ್ಯದ ಪೌಚುಗಳನ್ನು ಅಮಾನತ್ತುಪಡಿಸಿಕೊಳ್ಳಲಾಗಿದೆ ಎನ್ನುವುದು ಅಭಿಯೋಜನೆಯ ನಿಲುವಾಗಿದ್ದರೂ ಕೂಡಾ ನಿಪಿ-2 ರಲ್ಲಿ ಪಂಚ ಸಾಕ್ಷಿದಾರರಾದ ಚಾಸಾ-5 ಮತ್ತು ಚಾಸಾ-6 ರವರು ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿಯದೇ ಇರುವುದರಿಂದ ಅಭಿಯೋಜನೆಯು ನಿಪಿ-2 ನ್ನು ರುಜುವಾತುಪಡಿಸಲು ಸಾಧ್ಯವಾಗಿಲ್ಲ. ಘಟನಾ ಸ್ಥಳದ ಆಸುಪಾಸಿನಲ್ಲಿ ಲಭ್ಯವಿರಬಹುದಾದ ಯಾವುದೇ ಸ್ವತಂತ್ರ ಹಾಗೂ ಸ್ವಾಭಾವಿಕ ಸಾಕ್ಷಿದಾರರನ್ನು ತನಿಖಾಧಿಕಾರಿಯು ವಿಚಾರಿಸಿ ಹೇಳಿಕೆ ಪಡೆದುಕೊಂಡಿರುವುದಿಲ್ಲ. ಪ್ರಕರಣದ ಮುಖ್ಯ ಸಾಕ್ಷಿದಾರರಾದ ಫ್ರಾಸಾ-1 ರಿಂದ ಫ್ರಾಸಾ-3 ರವರ ಸಾಕ್ಷ್ಯವು ಮಾತ್ರವೇ ನ್ಯಾಯಾಲಯದ ಮುಂದೆ ಲಭ್ಯವಿದ್ದು ಸದರಿಯವರು ಆರಕ್ಷಕ ಸಾಕ್ಷಿದಾರರಾಗಿದ್ದು ಅವರು ತಮ್ಮ ಕರ್ತವ್ಯಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿದಿದ್ದು ಸಹಜವಾಗಿ ಇವರ ಸಾಕ್ಷ್ಯವು ಅಭಿಯೋಜನೆಯ ನೆರವಿಗೆ ಬಂದಿರುವುದಿಲ್ಲ.

14. ಮಾದರಿ ದ್ರವ್ಯದ ರಾಸಾಯನಿಕ ವಿಶ್ಲೇಷಣಾ ವರದಿಯನ್ನು ನಿಪಿ-5 ರಂತೆ ಗುರುತಿಸಿಕೊಳ್ಳಲಾಗಿದೆ. ಸದರಿ ದಾಖಲೆಯ ವಿವರಗಳ ಪ್ರಕಾರ ಮಾದರಿ ದ್ರವ್ಯದಲ್ಲಿ ಮದ್ಯಸಾರದ ಅಂಶವಿರುವುದು ಕಂಡುಬರುತ್ತದೆ. ಆದರೆ ಮಾದರಿ ದ್ರವ್ಯವನ್ನು ಆರೋಪಿತನಿಂದಲೇ ವಶಪಡಿಸಿಕೊಳ್ಳಲಾಗಿದೆ ಎನ್ನುವ ಸಂಗತಿಯನ್ನು ಖಚಿತವಾಗಿ ನಿರೂಪಿಸಲು ಅಭಿಯೋಜನೆ ವಿಫಲವಾಗಿರುವುದರಿಂದ ನಿಪಿ-5 ರ ವಿವರಗಳನ್ನು ಆರೋಪ ನಿರ್ಣಯದಲ್ಲಿ ಪೂರಕ ಸಾಕ್ಷ್ಯವನ್ನಾಗಿ ಬಳಸಿಕೊಳ್ಳಲು ಆಸ್ಪದ ಇರುವುದಿಲ್ಲ. ಆದುದರಿಂದ ಪುಷ್ಟೀಕರಿಸಲ್ಪಡದ ಫ್ರಾಸಾ-1 ರಿಂದ ಫ್ರಾಸಾ-3 ರವರ ಸಾಕ್ಷ್ಯದ ಆಧಾರದಲ್ಲಿ ಆರೋಪಿತನ ವಶದಿಂದ ಮದ್ಯದ ಪೌಚುಗಳನ್ನು ಜಪ್ತುಪಡಿಸಿಕೊಳ್ಳಲಾಗಿದೆ ಎನ್ನುವುದಾಗಿ ಅಭಿಪ್ರಾಯಪಡುವುದು ಅಪಾಯಕಾರಿಯಾಗಿ ಕಂಡುಬರುತ್ತದೆ. ಹೀಗಾಗಿ ಪ್ರಕರಣದ ಒಟ್ಟಾರೆ ಸಂದರ್ಭಗಳ ಹಿನ್ನೆಲೆಯಲ್ಲಿ ಕೇವಲ ಆರಕ್ಷಕ

ಸಾಕ್ಷಿದಾರರ ಸಾಕ್ಷ್ಯವನ್ನು ಆಧರಿಸಿ ಆರೋಪಿತನ ಮತ್ತು ಜಪ್ತುಪಡಿಸಿಕೊಳ್ಳಲಾದ ಮಧ್ಯದ ಪೌಚ್‌ಗಳ ನಡುವಿನ ಸಂಬಂಧ ರುಜುವಾತಾಗಿದೆ ಎಂದು ಅಭಿಪ್ರಾಯಪಡುವುದು ಅಪಾಯಕಾರಿಯಾಗಿ ಕಂಡುಬರುತ್ತದೆ.

15. ಒಟ್ಟಾರೆಯಾಗಿ ನ್ಯಾಯಾಲಯದ ಮುಂದೆ ಲಭ್ಯವಿರುವ ಸಾಕ್ಷ್ಯಾಧಾರಗಳನ್ನು ಗಮನಿಸುವಾಗ ಆರೋಪಿತನು ಆಪಾದಿಸಲಾದ ಕೃತ್ಯವನ್ನು ಎಸಗಿರುತ್ತಾರೆ ಎನ್ನುವ ಸಂಗತಿಯು ರುಜುವಾತಾಗಿಲ್ಲ ಎನ್ನುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಆದುದರಿಂದ ಇನ್ನೂ ಹೆಚ್ಚಿನ ಚರ್ಚೆಗೆ ಆಸ್ಪದ ನೀಡದೇ ಆರೋಪಿತನ ವಿರುದ್ಧ ಹೊರಿಸಲಾದ ದೋಷಾರೋಪಣೆಯನ್ನು ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ಅಭಿಯೋಜನೆ ವಿಫಲವಾಗಿದೆ ಎನ್ನುವುದಾಗಿ ಅಭಿಪ್ರಾಯಪಟ್ಟಿದ್ದು, ಈ ಮೇಲಿನ 1 ಮತ್ತು 2ನೇ ಅಂಶಗಳನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

16. **ಅಂಶ ನಂ.3 :** ಮೇಲೆ ಹೇಳಿದ ವಸ್ತುಸ್ಥಿತಿ ಮತ್ತು ಕಾರಣಗಳ ಆಧಾರದ ಮೇಲೆ ಈ ಕೆಳಗಿನಂತೆ ಆದೇಶ ಮಾಡಲಾಗಿದೆಃ

**:: ಆದೇಶ ::**

**ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರನ್ವಯ ಆರೋಪಿತನನ್ನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ರಡಿಯಲ್ಲಿ ಶಿಕ್ಷಿಸಬಹುದಾದ ಅಪರಾಧಗಳಿಂದ ನಿರ್ದೋಷಿ ಎಂದು ತೀರ್ಮಾನಿಸಿ ಬಿಡುಗಡೆ ಮಾಡಲಾಗಿದೆ.**

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 437(ಎ) ಅಡಿಯಲ್ಲಿ ಆರೋಪಿತನು ಬರೆದುಕೊಟ್ಟ ಜಾಮೀನು ಮುಚ್ಚಳಿಕೆ ಮುಂದಿನ 6 ತಿಂಗಳುಗಳವರೆಗೆ ಚಾಲ್ತಿಯಲ್ಲಿ**

**ಇರತಕ್ಕದ್ದು, ನಂತರ ಆರೋಪಿತಳು ಬರೆದುಕೊಟ್ಟ ಜಾಮೀನು ಮುಚ್ಚಳಿಕೆಯನ್ನು ರದ್ದುಪಡಿಸಲಾಗಿದೆ.**

**ಮಾಲುಪಟ್ಟಿ ಸಂಖ್ಯೆ 61/2023 ರ ದಿನಾಂಕ 22-03-2023 ರಲ್ಲಿ ಕ್ರಮ ಸಂಖ್ಯೆ 1 ರಿಂದ 3 ರಲ್ಲಿ ನಮೂದಿಸಿರುವ ಮದ್ಯದ ಪೌಚುಗನಳ್ಳು ಮೇಲ್ಮನವಿ ಅವಧಿ ಮುಗಿದ ನಂತರ ಕಾಯಿದೆಯ ನಿಯಮಾನುಸಾರವಾಗಿ ನಾಶಪಡಿಸಲು ನ್ಯಾಯಾಲಯವು ಈ ಮೂಲಕ ಆದೇಶಿಸಿದೆ.**

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಅವರು ಗಣಕೀಕೃತಗೊಳಿಸಿದ ತರ್ಜುಮೆಯನ್ನು ತಿದ್ದಿ ಸಹಿ ಮಾಡಿ ದಿನಾಂಕ 23 ನೇ ಜುಲೈ, 2026 ರಂದು ತೆರೆದ ನ್ಯಾಯಾಲಯದಲ್ಲಿ ನಾನು ಉದ್ಘೋಷಿಸಿರುತ್ತೇನೆ.)

(ಶ್ರೀಮತಿ ಶೃತಿ ವಿ.)
3 ನೇ ಪ್ರ.ದ.ನ್ಯಾ ದಂಡಾಧಿಕಾರಿಗಳು, ಶಿವಮೊಗ್ಗ.

**:: ಅನುಬಂಧ ::**

**ಅಭಿಯೋಜನೆ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ:**

| | | |
|---|---|---|
| ಫ್ರಾಸಾ-1 | : | ಸುರೇಶ್ ಎಂ. |
| ಫ್ರಾಸಾ-2 | : | ಶ್ರೀಮತಿ ಧನಲಕ್ಷ್ಮೀ |
| ಫ್ರಾಸಾ-3 | : | ಅಭಯಪ್ರಕಾಶ್ ಸೋಮನಾಳ್ |

**ಅಭಿಯೋಜನೆ ಪರ ನಿಶಾನಿಸಲಾದ ದಾಖಲೆಗಳ ಪಟ್ಟಿ:**

| | | |
|---|---|---|
| ನಿಪಿ-1 | : | ದೂರು |
| ನಿಪಿ-1(ಎ) ಮತ್ತು (ಬಿ) | : | ಸಹಿಗಳು |
| ನಿಪಿ-2 | : | ಅಮಾನತುಪಂಚನಾಮೆ |
| ನಿಪಿ-2(ಎ) | : | ಸಹಿ |
| ನಿಪಿ-3 | : | ಭಾವಚಿತ್ರ |

| | | |
|---|---|---|
| ನಿಪಿ-4 | : | ಪ್ರ.ವ.ವರದಿ |
| ನಿಪಿ-4(ಎ) | : | ಸಹಿ |
| ನಿಪಿ-5 | : | ಎಫ್.ಎಸ್.ಎಲ್. ವರದಿ |
| ನಿಪಿ-5(ಎ) | : | ಸಹಿ |

**ಅಭಿಯೋಜನೆ ಪರ ಗುರುತಿಸಲಾದ ಮುದ್ದೆಮಾಲುಗಳ ಪಟ್ಟಿ:**

-: ಇಲ್ಲ :-

**ಆರೋಪಿ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ:**

-: ಇಲ್ಲ :-

**ಆರೋಪಿ ಪರ ನಿಶಾನಿಸಲಾದ ದಾಖಲೆಗಳ ಪಟ್ಟಿ:**

-: ಇಲ್ಲ :-

SHRUTHI V

Digitally signed by SHRUTHI V
Date: 2026.07.25 10:39:07 +0530

**(ಶ್ರೀಮತಿ ಶೃತಿ ವಿ.)**

**3 ನೇ ಪ್ರ.ದ.ನ್ಯಾ ದಂಡಾಧಿಕಾರಿಗಳು, ಶಿವಮೊಗ್ಗ.**

(ತೀರ್ಪನ್ನು ತೆ.ನ್ಯಾ.ದಲ್ಲಿ ಪ್ರತ್ಯೇಕ ತೀರ್ಪಿನೊಂದಿಗೆ ಘೋಷಿಸಲಾಯಿತು)

**ಆದೇಶ**

**ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರನ್ವಯ ಆರೋಪಿತನನ್ನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ರಡಿಯಲ್ಲಿ**

**ಶಿಕ್ಷಿಸಬಹುದಾದ ಅಪರಾಧಗಳಿಂದ ನಿರ್ದೋಷಿ ಎಂದು ತೀರ್ಮಾನಿಸಿ ಬಿಡುಗಡೆ ಮಾಡಲಾಗಿದೆ.**

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 437(ಎ) ಅಡಿಯಲ್ಲಿ ಆರೋಪಿತನು ಬರೆದುಕೊಟ್ಟ ಜಾಮೀನು ಮುಚ್ಚಳಿಕೆ ಮುಂದಿನ 6 ತಿಂಗಳುಗಳವರೆಗೆ ಚಾಲ್ತಿಯಲ್ಲಿ ಇರತಕ್ಕದ್ದು, ನಂತರ ಆರೋಪಿತಳು ಬರೆದುಕೊಟ್ಟ ಜಾಮೀನು ಮುಚ್ಚಳಿಕೆಯನ್ನು ರದ್ದುಪಡಿಸಲಾಗಿದೆ.**

**ಮಾಲುಪಟ್ಟಿ ಸಂಖ್ಯೆ 61/2023 ರ ದಿನಾಂಕ 22-03-2023 ರಲ್ಲಿ ಕ್ರಮ ಸಂಖ್ಯೆ 1 ರಿಂದ 3 ರಲ್ಲಿ ನಮೂದಿಸಿರುವ ಮಧ್ಯದ ಪೌಚುಗನಳ್ಳು ಮೇಲ್ಮನವಿ ಅವಧಿ ಮುಗಿದ ನಂತರ ಕಾಯಿದೆಯ ನಿಯಮಾನುಸಾರವಾಗಿ ನಾಶಪಡಿಸಲು ನ್ಯಾಯಾಲಯವು ಈ ಮೂಲಕ ಆದೇಶಿಸಿದೆ.**

3 ನೇ ಪ್ರ.ದ.ನ್ಯಾ. ದಂಡಾಧಿಕಾರಿಗಳು, ಶಿವಮೊಗ್ಗ.